**<u>ಸಾಕ್ಷಿಯನ್ನು ದಿನಾಂಕ:11.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಬಿ ಆರ್ ಆರ್ ವಕೀಲರಿಂದ:</u>**

ನಾನು ಶಿಕ್ಷಕ. ನಮ್ಮ ಕುಟುಂಬದ ಆಸ್ತಿಗಳ ವಿವರಗಳು ಗೊತ್ತು. ನಮ್ಮ ಕುಟುಂಬದ ಆಸ್ತಿಗಳ ಪೈಕಿ ಒಂದು ಆಸ್ತಿ ನಾವು ಸ್ವಾಧೀನದಲ್ಲಿದ್ದರೂ, ಬೇರೆಯವರ ಹೆಸರಿನಲ್ಲಿ ಬರುತ್ತಿದೆ. ಆ ರೀತಿ ಬೇರೆಯವರ ಹೆಸರಿನಲ್ಲಿ ಎಂದರೆ ವಾದಿಯ ಹೆಸರಿನಲ್ಲಿ ಬರುತ್ತಿದೆ. ಆ ರೀತಿ ಬರುತ್ತಿರುವ ಖಾತೆಯನ್ನು ಪ್ರಶ್ನಿಸಿ ಅಪೀಲು ಸಲ್ಲಿಸಿರುವುದಿಲ್ಲ ಮತ್ತು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು, ತಾನು ಕೇಳಿದ್ದೆ ಎಂದು ನುಡಿಯುತ್ತಾರೆ. ವಾದಿ ಸದರಿ ಆಸ್ತಿಗೆ ಮುಂದೆ ಮಾಡಿಕೊಡುವುದಾಗಿ ಹೇಳಿದ ಕಾರಣ, ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಕುರಿತು ವಾದಿಯ ಮಗ ಮತ್ತು 3ನೇ ಪ್ರತಿವಾದಿಯನ್ನು ಕೇಳಿದ್ದೆ. ವಾದಿ ಇತ್ತೀಚೆಗೆ ಊರಿನಲ್ಲಿ ಇರುವುದಿಲ್ಲ.

2. ವಾದಿ ಸಹಿ ಮಾಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ವಾದಿಗೆ ಅಪಘಾತವಾದ ಬಗ್ಗೆ ಊರಿನವರಿಂದ ನಾನು ಕೇಳಲ್ಪಟ್ಟಿದ್ದೆ. ವಾದಿ ಹೇಗಿದ್ದಾರೆ ಎಂದು ನಾನು ನೋಡಲು ಪ್ರಯತ್ನಪಟ್ಟಿರುವುದಿಲ್ಲ. ದಾವಾ ಐಟಂ ನಂ.3 ರ 32 ಗುಂಟೆ ವಾದಿಯ ಮಾಲೀಕತ್ವ ಮತ್ತು ಸ್ವಾಧೀನದಲ್ಲಿದೆ ಎಂದರೆ ಸಾಕ್ಷಿಯು ವಾದಿ 16 ಗುಂಟೆ ಮತ್ತು ತಾವು 16 ಗುಂಟೆ ಇರುತ್ತೇವೆ ಎಂದು ನುಡಿಯುತ್ತಾರೆ. ನಮಗೆ 16 ಗುಂಟೆ ಇದೇ ಎಂದು ತೋರಿಸಲು ನಮ್ಮ ಬಳಿ ಕ್ರಯ ಪತ್ರದ ದೃಢೀಕೃತ ಪ್ರತಿ ಇದೆ.

3. ನಮ್ಮ ಕುಟುಂಬದಲ್ಲಿ ವಿಭಾಗವಾಗಿಲ್ಲ. ದಾವಾ ಐಟಂ ನಂ.3 ರ ಸರ್ವೆ ನಂಬರ್ ಆಸ್ತಿಯನ್ನು ನನ್ನ ದೊಡ್ಡ ತಾತನ ಮಕ್ಕಳು ಮಾರಾಟ ಮಾಡಿದ್ದಾರೆ. ನನ್ನ ದೊಡ್ಡ ತಾತನ ಮಕ್ಕಳು

ಅವರ ಕುಟುಂಬದಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿಯವರು ಮಾಡಿಕೊಂಡ ವಿಭಾಗದಲ್ಲಿ ದಾವಾ ಐಟಂ ನಂ.3 ರ 16 ಗುಂಟೆಯನ್ನು ನಮ್ಮ ಅಜ್ಜಿ ಸಾಕಮ್ಮನವರ ಹೆಸರಿಗೆ ತೋರಿಸಲಾಗಿದೆ.

4. ಸಾಕ್ಷಿಗೆ ದಾವಾ ಐಟಂ ನಂ.3 ರ ಚೆಕ್ಕುಬಂದಿ 32 ಗುಂಟೆಗೆ ಎಂದು ಓದಿ ಹೇಳಲಾಗಿ, ಸಾಕ್ಷಿ ಅದು ಸರಿ ಇರುತ್ತದೆ ಎಂದು, ದಕ್ಷಿಣಕ್ಕೆ ತಮ್ಮ ಅಜ್ಜಿ ಸಾಕಮ್ಮ ಎನ್ನುವುದು ಸರಿ ಇದೆ ಎಂದು ನುಡಿಯುತ್ತಾರೆ. ವಾಸ್ತವಿಕವಾಗಿಯೂ ದಕ್ಷಿಣಕ್ಕೆ ನಮ್ಮ ಅಜ್ಜಿ ಸಾಕಮ್ಮನ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದೇವೆ. ಸಾಕಮ್ಮನವರಿಗೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಇಬ್ಬರು ಮಕ್ಕಳು. ಸದರಿ ಇಬ್ಬರು ಮಕ್ಕಳು ವಾದಿಯ ಖಾತೆಯನ್ನು ಪ್ರಶ್ನೆ ಮಾಡಿರುವುದಿಲ್ಲ.

5. ನಿಪಿ.1ರ ಬಗ್ಗೆ ವಾದಿಯ ಮಗ ಮತ್ತು 3ನೇ ಪ್ರತಿವಾದಿಯನ್ನು ಕೇಳಿದ್ದೆ. ವಾದಿಯು ಊರಿನಲ್ಲಿ ಸಿಗದ ಕಾರಣ, ನಾನು ಕೇಳಿರುವುದಿಲ್ಲ. ನಿಪಿ.1ರ ಬಗ್ಗೆ ನನಗೆ 2020ರಲ್ಲಿ ಗೊತ್ತಾಗಿರುತ್ತದೆ. ನಾನು ನಮ್ಮ ಊರಿನಲ್ಲಿಯೇ ವಾಸವಿದ್ದೇನೆ. ನಾನು 2020 ರಲ್ಲಿ ವಾದಿಯ ಮಗನನ್ನು ನಿಪಿ.1ರ ಬಗ್ಗೆ ಕೇಳುವ ಮೊದಲೇ ವಾದಿಗೆ ಅಪಘಾತವಾಗಿತ್ತು. 2017ಕ್ಕೂ ಮುನ್ನಾ ವಾದಿಗೆ ಅಪಘಾತವಾಗಿದ್ದ ಬಗ್ಗೆ ನಾನು ಕೇಳಿರುವುದಿಲ್ಲ.

6. ವಾದಿಗೆ ನೆನಪಿನ ಶಕ್ತಿ ಕಡಿಮೆಯಾಗಿದೆ ಎಂದು ಊರಿನವರು ಮಾತನಾಡಿದ ಕಾರಣ, ನನಗೆ ತಿಳಿಯಿತು. ವಾದಿ ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ಕೂಡಿದ್ದಾರೆ ಎಂದರೆ ಸಾಕ್ಷಿಯು ತಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ಈ ದಾವೇಯನ್ನು ಹೂಡಲು ತಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ವಾದಿ ಈಗಲೂ ದೈಹಿಕ ಮತ್ತು ಮಾನಸಿಕವಾಗಿ

ಆರೋಗ್ಯವಾಗಿದ್ದು, ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳುವವರು ಆಗಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವಾ ಐಟಂ ನಂ.3 2017ಕ್ಕೂ ಮುನ್ನಾ ವಾದಿ ಮತ್ತು ಪ್ರತಿವಾದಿಯ ಕುಟುಂಬದ ಮಾಲೀಕತ್ವದ ಆಸ್ತಿಯಾಗಿತ್ತು ಎಂದರೆ ಸರಿಯಲ್ಲ. 2017ರ ನಂತರ 32 ಗುಂಟೆಗೆ ವಾದಿ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

7. ನನಗೆ ನೊಂದಣಿ ಕ್ರಯಪತ್ರದ ಬಗ್ಗೆ ಮಾಹಿತಿ ಇದೆ. ಯಾವುದೇ ವಿಭಾಗವಾಗಬೇಕಾದರೆ, ಕುಟುಂಬದ ಸದಸ್ಯರ ಹೆಸರಿನಲ್ಲಿ ಪಹಣಿ ಇರಬೇಕು ಎಂದರೆ ಸಾಕ್ಷಿಯು ತಮಗೆ ತಿಳಿಯದಂತೆ ಅವರು ಯಾವಾಗಲೋ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.3ರಲ್ಲಿ ವಾದಿ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿದ್ದರು ಸುಳ್ಳು ದಾವೇ ಹೂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ಯಾವುದೇ ನೆನಪಿನ ಶಕ್ತಿ ಕುಂದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.